
ತಮಿಳುನಾಡಿನ ನಾಯನಾರ್ ಸಂತರು – ೬

# ಕೋಚೆಂಗಾಟ್ ಚೋಳ ನಾಯನಾರ್


ಕಥೆ : ಡಾ. ವಿ. ಹೇಮಾ

ಚಿತ್ರ : ಶಂಕರ್


**1** ಚೋಳ ಸಾಮ್ರಾಜ್ಯದಲ್ಲಿ ಒಂದು ಬಿಳಿ ಜಂಬೂನೇರಳೆ ಹಣ್ಣಿನ ಮರದಡಿಯಲ್ಲಿ ಒಂದು ಶಿವಲಿಂಗವಿತ್ತು. ಅದರ ಸಮೀಪದಲ್ಲೇ ಇದ್ದ ಚಂದ್ರತೀರ್ಥವೆಂಬ ಕೆರೆಯಿಂದ ಆನೆಯೊಂದು ಪ್ರತಿದಿನವೂ ನೀರನ್ನು ತಂದು ಆ ಶಿವಲಿಂಗಕ್ಕೆ ಅಭಿಷೇಕ ಮಾಡುತ್ತಿತ್ತು.




**2** ಆ ಮರದಲ್ಲಿ ಒಂದು ಜೇಡ ವಾಸವಾಗಿತ್ತು. ಅದೂ ಕೂಡ ಆ ಶಿವಲಿಂಗವನ್ನು ಪೂಜಿಸುತ್ತಿತ್ತು. ತರಗೆಲೆ ಅಥವಾ ಧೂಳು ಶಿವಲಿಂಗದ ಮೇಲೆ ಬೀಳದಂತೆ ಅದರ ಸುತ್ತ ಜೇಡ ಬಲೆ ಹೆಣೆದಿತ್ತು.




**3** ಒಂದು ದಿನ ಜೇಡ ಆ ಶಿವಲಿಂಗದ ಮೇಲೆ ಅಪಾರ ಭಕ್ತಿಯಿಂದ ಚಾವಣಿಯಂತೆ ಒಂದು ಬಲೆಯನ್ನು ಹೆಣೆದಿತ್ತು.




**4**




5 ಆನೆ ತನ್ನ ಸೊಂಡಿಲಿನಿಂದ ಬಲೆಯನ್ನೆಲ್ಲ ತೆಗೆದು ಹಾಕಿತು. ಅದನ್ನು ನೋಡಿದ ಜೇಡನಿಗೆ ತುಂಬಾ ಕೋಪ ಬಂತು.
ಶಿವಲಿಂಗವನ್ನು ರಕ್ಷಿಸುತ್ತಿದ್ದ ನನ್ನ ಬಲೆಯನ್ನು ತೆಗೆದು ಹಾಕಿದ ಈ ಆನೆಯನ್ನು ನಾನು ಸುಮ್ಮನೆ ಬಿಡಲಾರೆ!
6 ಆನೆಯ ಸೊಂಡಿಲಿನ ಒಳಗೆ ಹೊಕ್ಕ ಜೇಡ ಅದರ ಮರ್ಮಸ್ಥಾನಗಳನ್ನೆಲ್ಲ ಕಡಿಯಿತು.
ಶಿವ! ಶಿವಾ! ಇದೇನಿದು? ಈ ನೋವನ್ನು ನನಗೆ ಸಹಿಸಲಾಗುತ್ತಿಲ್ಲ.
ನೋವು ಸಹಿಸಲಾಗದೆ ಆನೆ ತನ್ನ ಸೊಂಡಿಲನ್ನು ನೆಲಕ್ಕೆ ಅನೇಕ ಸಲ ಜೋರಾಗಿ ಬಡಿದು ಸತ್ತುಹೋಯಿತು.
7 ಕೈಲಾಸದಲ್ಲಿದ್ದ ಶಿವಪಾರ್ವತಿಯರು ಇದನ್ನು ನೋಡಿದರು.
ಸ್ವಾಮಿ, ಇದೇನು ನಿನ್ನ ದೈವೀ ಲೀಲೆ! ನಿನ್ನ ಮೇಲೆ ಅಪಾರ ಭಕ್ತಿಯನ್ನು ಹೊಂದಿದ್ದ ಆನೆ ಮತ್ತು ಜೇಡ ಎರಡೂ ಸತ್ತು ಹೋದವು.
ದೇವಿ, ಚಿಂತಿಸಬೇಡ. ಆನೆಗೆ ಮುಕ್ತಿ ದೊರಕಿದೆ. ಇಂದಿನಿಂದ ಆನೆ ರಕ್ಷಿಸುತ್ತಿದ್ದ ಆ ಪ್ರದೇಶವನ್ನು ತಿರುವಣೈ ಕಾವಲ್ ಎಂದು ಕರೆಯುತ್ತಾರೆ.
8 ಜೇಡನ ಬಗ್ಗೆ ನಿನ್ನ ತೀರ್ಮಾನವೇನು?
ದೇವಿ, ಕಾದು ನೋಡು...

**9** ಚೋಳರಾಜ ಶುಭದೇವನು ನಟರಾಜನ ಪರಮಭಕ್ತನಾಗಿದ್ದ. ತನ್ನ ಬಳಿಕ ರಾಜ್ಯದ ಉತ್ತರಾಧಿಕಾರಿಯಾಗಲು ಒಂದು ಗಂಡುಮಗುವಿಗಾಗಿ ಅವನು ದೇವರನ್ನು ಪ್ರಾರ್ಥಿಸುತ್ತಿದ್ದ. ಅವನ ಭಕ್ತಿಗೆ ಮೆಚ್ಚಿದ ಶಿವನು ಒಂದು ದಿನ ಅವನ ಮುಂದೆ ಪ್ರತ್ಯಕ್ಷನಾದ.




**10** ಶಿವನ ಅನುಗ್ರಹದಿಂದ ಶುಭದೇವನ ಪತ್ನಿ ಗರ್ಭಿಣಿಯಾದಳು. ಅವಳು ಮಗುವಿಗೆ ಜನ್ಮ ನೀಡುವ ಸಮಯ ಸಮೀಪಿಸಿತು..





ರಾಜ, ಜ್ಯೋತಿಷ್ಯರು ಹೇಳಿದ ವಿಚಾರವನ್ನು ರಾಣಿಗೆ ತಿಳಿಸಿದ.

**11**





ಸೇವಕಿಯರು ರಾಣಿ ಆಜ್ಞೆ ಮಾಡಿದಂತೆಯೇ ಮಾಡಿದರು. ಶುಭಗಳಿಗೆಯಲ್ಲಿ ರಾಣಿ ಗಂಡುಮಗುವನ್ನು ಹೆತ್ತಳು. ಆದರೆ ಹೆರಿಗೆ ತಡವಾದದ್ದರಿಂದ ಅವಳ ಜೀವಕ್ಕೆ ಅಪಾಯವುಂಟಾಗಿತ್ತು.


**12**



13 ಕಾಲ ಕಳೆಯಿತು. ಸೇಂಕಣ್ಣನ್ ಬೆಳೆದು ಯುವಕನಾದ.




14 ಹಿಂದಿನ ಜನ್ಮದಲ್ಲಿ ಶಿವನನ್ನು ಆರಾಧಿಸಿದ್ದ ಜೇಡನೇ ಈಗ ಸೇಂಕಣ್ಣನ್ ಆಗಿ ಜನ್ಮ ತಳೆದಿತ್ತು. ಆದ್ದರಿಂದ ಸೇಂಕಣ್ಣನ್ ಬಾಲ್ಯದಿಂದಲೇ ತಿರುವಣ್ಣೈಕಾವಲ್ ಶಿವನ ಮೇಲೆ ಅಪಾರ ಭಕ್ತಿಯನ್ನು ಹೊಂದಿದ್ದ.




15 ದೇವರ ಸೇವೆ ಮಾಡಿದವರಿಗೆ ಅವನು ಮುಕ್ತಿ ನೀಡುತ್ತಾನೆ. ಅವನು ಭಕ್ತಿಯನ್ನೂ ಕರುಣಿಸುತ್ತಾನೆ; ಈ ಮೂಲಕ ಅವನ ಭಕ್ತರು ಈ ಜನ್ಮದಲ್ಲೇ ಪರಮಾನಂದವನ್ನು ಹೊಂದುತ್ತಾರೆ.